**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 87/2023**

**ಪಿ ಡಬ್ಲ್ಯೂ/2**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 18/07/2024.**

**ಪಾಟೀ ಸವಾಲುಃ ಶ್ರೀ ಎಸ್ ಪಿ ಬಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

**1.** ವಾದಿ ಮತ್ತು ನನ್ನ ನಡುವೆ ನಮ್ಮ ಹೊಲ ಆಜುಬಾಜು ಇದ್ದಿದ್ದರಿಂದ ಪರಿಚಯ ಇರುತ್ತದೆ. ನಾನು 22 ವರ್ಷಗಳಿಂದ ನನ್ನ ಹೊಲವನ್ನು ಉಳುಮೆ ಮಾಡುತಿದ್ದೇನೆ. ವಾದಿ ಅಶೋಕ ಹೊಲ ಮನೆ ಕೆಲಸ ಮಾಡುತಿದ್ದು ಈಗ 25 ವರ್ಷಗಳ ಮೇಲೆ ಆಗಿರುತ್ತದೆ. ದಾವಾ ಜಮೀನಿನ ಪೂರ್ವ ಭಾಗದ ಅಂಚಿನಲ್ಲಿ ನಾಲ್ಕು ಕಂಬಗಳು ಮತ್ತು ಅವುಗಳನ್ನು ಹೊಂದಿ ವಿದ್ಯುತ ತಂತಿಗಳು ಇವೆ. ಸದರಿ ಕಂಬಗಳನ್ನು 2012 ನೇ ಇಸ್ವಿಯಲ್ಲಿ ಹಾಕಿದ್ದರಾ ಎಂದರೆ ಸಾಕ್ಷಿ ಪ್ರತಿವಾದಿ ಕಂಪನಿ ಚಾಲೋ ಆದಾಗಿನಿಂದ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಕಂಪನಿಯವರು ಕಂಬ ಹಾಕುವಾಗ ವಾದಿ ಯಾವುದೇ ತಕರಾರು ಮಾಡಿರುವುದಿಲ್ಲ.

2. 2012 ನೇ ಇಸ್ವಿಯಿಂದ ಇಲ್ಲಿಯವರೆಗೆ ವಾದಿ ಊರಿನಲ್ಲಿ ಹಿರಿಯರನ್ನು ಕೂಡಿಸಿ ಅವರಿಗೆ ತೊಂದರೆ ಆಗುತ್ತಿರುವ ಬಗ್ಗೆ ವಿಚಾರ ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ಕಂಪನಿ ಇವರು ಸದರಿ ಕಂಬಗಳನ್ನು ವಾದಿಯ ಅನುಮತಿ ಮೇಲೆ ಸ್ಥಾಪಿಸಿರುತ್ತಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಹೊಲದಲ್ಲಿ 40 ರಿಂದ 50 ಮಾವಿನ ಗಿಡಗಳು ಇದ್ದವು. ವಾದಿ ನನಗೆ ಪರಿಹಾರ ನೀಡಿ ಅಂತವಾಗಲೀ, ಹಿರಿಯರ ಮೂಲಕ ತಕರಾರು ಸಲ್ಲಿಸುವುದಾಗಲೀ, ಪೊಲೀಸ ಠಾಣೆಯಲ್ಲಿ ಪ್ರತಿವಾದಿಯ ವಿರುದ್ಧ ದೂರು ನೀಡುವ ಯಾವುದೇ ಕಾರ್ಯ ಕೈಗೊಂಡಿರುವುದಿಲ್ಲ ಎಂದರೆ ಸರಿ.

3. ನನಗೆ ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳ ಮಾಹಿತಿ ಇದೆ. ನನ್ನ ಹೊಲದ ಪಶ್ಚಿಮದ ಕಡೆಗೆ ವಾದಿಯ ಹೊಲ ಇದೆ. ಸಾಮಾನ್ಯವಾಗಿ ಕಂಪನಿಯವರು ಪರಿಹಾರ ನೀಡಿ ನಂತರದಲ್ಲಿ ಕಂಬಗಳನ್ನು ಹಾಕುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕಂಪನಿಯವರಿಂದ ಹೆಚ್ಚಿನ ಪರಿಹಾರದ ಹಣ ಪಡೆಯುವ ದುರುದ್ದೇಶದಿಂದ ವಾದಿಯು ದಾವೆ ಸಲ್ಲಿಸಿದ್ದು ಆ ಪ್ರಕಾರ ನಾನು ವಾದಿ ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**